# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್.ಉಪಲೋಕ್/ಬಿ.ಡಿ-836/2017/ಡಿಆರ್‌ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:22-11-2017.

## *ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ*

ವಿಷಯ: ಶ್ರೀ ದೇವದಾಸ ಶೆಟ್ಟಿ, ಸಾಯಿನಾಥ ಫಾರ್ಮ, ಪಿ.ಓ. ಪೆದ್ದಮಲೆ, ನೀರ್‌ಮಾರ್ಗ, ಮಂಗಳೂರು, ನಿವಾಸಿ ಇವರು ಸಲ್ಲಿಸಿರುವ ದೂರಿನ ಬಗ್ಗೆ.

****

ಈ ದೂರನ್ನು ಶ್ರೀ ದೇವದಾಸ ಶೆಟ್ಟಿ, ಸಾಯಿನಾಥ ಫಾರ್ಮ, ಪಿ.ಓ. ಪೆದ್ದಮಲೆ, ನೀರ್‌ಮಾರ್ಗ, ಮಂಗಳೂರು, ನಿವಾಸಿ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ಇವರು ವ್ಯವಸ್ಥಾಪಕರು, ಕೆ.ಎಸ್.ಎಫ್., ಕಾರ್ಪೋರೇಷನ್, ಚಿತ್ರದುರ್ಗ ಶಾಖೆ, ಚಿತ್ರದುರ್ಗ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದಾಖಲಿಸಿ, ಕರ್ನಾಟಕ ಲೋಕಾಯುಕ್ತ ಅಧಿನಿಯಮದಡಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. **ದೂರಿನ ಸಂಕ್ಷಿಪ್ತ ವಿವರ:**

ಎದುರುದಾರರಾದ ಕೆ.ಎಸ್.ಎಫ್.ಸಿ., ಚಿತ್ರದುರ್ಗ ಶಾಖೆಯವರು ಒಂದು ಬಸ್ ನಂ.ಕೆ.ಎ-16/3363 ಇದನ್ನು ಜಪ್ತಿ ಮಾಡಿಕೊಂಡು ದಿನಾಂಕ: 7-2-2003 ರಂದು ನಮ್ಮ ಯಾರ್ಡನಲ್ಲಿಟ್ಟಿರುತ್ತಾರೆ. ನಾನು ಸದರಿ ಯಾರ್ಡನ ಮಾಲೀಕನಾಗಿದ್ದು, ಬ್ಯಾಂಕುಗಳು ಮತ್ತು ಇತರೇ ಹಣಕಾಸು ಸಂಸ್ಥೆಗಳಿಂದ ಜಪ್ತಿ ಮಾಡಲಾದ ವಾಹನಗಳನ್ನು ಇಟ್ಟುಕೊಂಡು ಅದಕ್ಕೆ ನೆಲ ಬಾಡಿಗೆ ಪಡೆಯುತ್ತಿದ್ದೇನೆ.. ಈಗ ನನಗೆ ಸುಮಾರು 78 ವರ್ಷ ವಯಸ್ಸಾಗಿದೆ. ಎದುರುದಾರರು ನೆಲ ಬಾಡಿಗೆ ಕೊಡುವುದನ್ನು ನಿಲ್ಲಿಸಿದ್ದಾರೆ. ವಾಹನವನ್ನು ಸಹ ತೆಗೆದುಕೊಂಡು ಹೋಗುತ್ತಿಲ್ಲ. ಬಾಕಿ ಹಣ ಸಂದಾಯ ಮಾಡಲು ಎದುರುದಾರರಿಗೆ ನಿರ್ದೇಶನ ಕೊಡುವಂತೆ ಮತ್ತು ಬಸ್ ಅನ್ನು ತೆಗೆದುಕೊಂಡು ಹೋಗಲು ಸೂಚಿಸುವಂತೆ ಕೋರಿಕೊಂಡಿದ್ದಾರೆ.

3. ಈ ದೂರಿನ ಮೇಲೆ ಎದುರುದಾರರಿಂದ ಅನುಪಾಲನಾ ವರದಿಯನ್ನು ಕೇಳಲಾಗಿದೆ.

(ಎ) ಎದುರುದಾರರು ತಮ್ಮ ಅನುಪಾಲನಾ ವರದಿಯಲ್ಲಿ ಸದರಿ ವಾಹನವನ್ನು ಸಂಸ್ಥೆಯ ವಶಕ್ಕೆ ಪಡೆದು ದೂರುದಾರರ ಮಾಲಿಕತ್ವದ ಮಂಗಳೂರಿನ ನೀರು ಮಾರ್ಗದಲ್ಲಿರುವ

ಸಾಯಿನಾಥ ಫಾರ್ಮನಲ್ಲಿ ನಿಲ್ಲಿಸಲಾಗಿದೆ. ನಾನು ದಿನಾಂಕ: 18-6-2015 ರಂದು ಶಾಖಾ ವ್ಯವಸ್ಥಾಪಕರಾಗಿ ಕೆಲಸಕ್ಕೆ ವರದಿ ಮಾಡಿಕೊಂಡಿದ್ದು ವಿವಾದ ಪರಿಹರಿಸಲು ಕ್ರಮ ತೆಗೆದುಕೊಂಡಿರುತ್ತೇನೆ. ದೂರುದಾರರಿಗೆ ನವಂಬರ್-2010 ರವರೆಗೆ ಸ್ಥಳ ಬಾಡಿಗೆ ಪಾವತಿಸಲಾಗಿದೆ. ಉಳಿದ ಅವಧಿಗೆ ತಗಲುವ ಬಾಡಿಗೆಯನ್ನು ವಾಹನದ ಸ್ಥಿತಿಗತಿ ಆಧಾರದ ಮೇಲೆ ಲೆಕ್ಕಾಚಾರ ಮಾಡಿ ವಾಹನವನ್ನು ಮಾರಾಟ ಮಾಡಿದ ನಂತರ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು ಅಂತ ತಿಳಿಸಿದ್ದಾರೆ. ಮಂಗಳೂರು ಸಾರಿಗೆ ಪ್ರಾಧಿಕಾರವು ವಾಹನ ಮಾರಾಟಕ್ಕೆ ಒಪ್ಪಿಗೆಕೊಡಬೇಕಾಗಿದ್ದು, ಹಲವಾರು ಪತ್ರವನ್ನು ಬರೆದಿದ್ದರೂ ಸಹ ಅನುಮತಿ ದೊರೆತಿಲ್ಲ. ಆದ್ದರಿಂದ, ಅಗತ್ಯವಿರುವ ಸಹಕಾರವನ್ನು ಕೊಡಲು ಮಂಗಳೂರು ಸಾರಿಗೆ ಪ್ರಾಧಿಕಾರದವರಿಗೆ ನಿರ್ದೇಶಣ ಕೊಡಲು ಕೋಡಿಕೊಂಡಿದ್ದಾರೆ ಅಂತ ತಿಳಿಸಿದ್ದಾರೆ.

4. ಎದುರುದಾರರ ಅನುಪಾಲನಾ ವರದಿಯ ಮೇಲೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿದೆ.

(ಎ) ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ತಮಗೆ ರೂ.1,02,600/- ಗಳ ಬಾಡಿಗೆ ಬರಬೇಕಾಗಿದೆ. ಎದುರುದಾರರು ಬಾಡಿಗೆ ಪಾವತಿಸುತ್ತಿಲ್ಲ ಮತ್ತು ಬಸ್ ತೆಗೆದುಕೊಂಡು ಹೋಗುತ್ತಿಲ್ಲ ಎಂದು ಹೇಳುತ್ತಿದ್ದಾರೆ.

5. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ಎದುರುದಾರರು ರಾಜ್ಯ ಸರ್ಕಾರದ ಸ್ವಾಮಿತ್ವದ ಹಣಕಾಸು ಸಂಸ್ಥೆಯಲ್ಲಿ ವ್ಯವಸ್ಥಾಪಕರಾಗಿದ್ದಾರೆ. ಒಂದು ಬಸ್ ಅನ್ನು ದೂರುದಾರರ ಯಾರ್ಡನಲ್ಲಿ 2003 ರಲ್ಲಿ ತಂದು ನಿಲ್ಲಿಸಿರುವುದು ವಿವಾದದಲ್ಲಿ ಇರುವುದಿಲ್ಲ. ವಾಹನ ಮಾರಾಟ ಆಗುವವರೆಗೆ ದೂರುದಾರರಿಗೆ ಬಾಡಿಗೆ ಪಾವತಿಸುವುದಿಲ್ಲ ಎನ್ನಲು ಎದುರುದಾರರಿಗೆ ಯಾವುದೇ ಅಧಿಕಾರ ಇರುವುದಿಲ್ಲ. ಒಂದು ಬಸ್ ಅನ್ನು ಜಪ್ತಿ ಮಾಡಿ ತಂದ ನಂತರ 2003 ರಿಂದ ಇಲ್ಲಿಯವರೆಗೆ ಕಲಂ 29 ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಕಾನೂನಿನ ಅಡಿಯಲ್ಲಿ ಕ್ರಮವನ್ನು ಜರುಗಿಸಿಲ್ಲ. ಎದುರುದಾರರು ಜೂನ್-2015 ರಿಂದ ಶಾಖಾ ವ್ಯವಸ್ಥಾಪಕರಾಗಿದ್ದಾರೆ. ದೂರುದಾರರೊಂದಿಗೆ ಫೋನ್ ಕರೆ ಮಾಡಿ ಚರ್ಚೆ ಮಾಡುತ್ತಿದ್ದೇನೆ ಅಂತ ಎದುರುದಾರರು ಹೇಳುತ್ತಿದ್ದಾರೆ. 2003 ರಿಂದ 2010 ರವರೆಗೆ ದೂರುದಾರರಿಗೆ ಬಾಡಿಗೆ ಕೊಟ್ಟಿರುವುದನ್ನು ಎದುರುದಾರರು ವಿವಾದಿಸುತ್ತಿಲ್ಲ. ಆರ್.ಟಿ.ಓ. ಮಂಗಳೂರು ಇವರಿಂದ ವಾಹನ ಮಾರಾಟ ಮಾಡಲು ಪರವಾನಿಗೆ ಪಡೆಯಬೇಕಾಗಿರುವುದು ಎದುರುದಾರರ ಕರ್ತವ್ಯವಾಗಿದೆ, ಇದೇ ಕಾರಣವನ್ನು ಮುಂದಿಟ್ಟು ದೂರುದಾರರಿಗೆ ಬಾಡಿಗೆ ಪಾವತಿಸುವುದಿಲ್ಲ ಅಂತ ಎದುರುದಾರರು ಹೇಳಲು ಬರುವುದಿಲ್ಲ. ಆದ್ದರಿಂದ, ಕಲಂ 29 ಕರ್ನಾಟಕ ರಾಜ್ಯ ಹಣಕಾಸು

ಸಂಸ್ಥೆ ಕಾನೂನಿನ ಅಡಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳುವಂತೆ ಮತ್ತು ದೂರುದಾರರಿಗೆ ಪಾವತಿಸಬೇಕಾಗಿರುವ ಬಾಡಿಗೆ ಹಣವನ್ನು ಪಾವತಿಸುವಂತೆ ಎದುರುದಾರರ ಶಿಸ್ತುಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 12(1) ಅಡಿಯಲ್ಲಿ ಶಿಪಾರಸ್ಸು ಮಾಡಲಾಗಿದೆ.

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

22/11/17.

(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ